**ಒ.ಎಸ್.ನಂ. 299/2013**
**ಪಿ. ಡಬ್ಲೂ-2**

**ದಿನಾಂಕಃ 20.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಪ್ರತಿವಾದಿ ಪರ ಶ್ರೀ ಎಂ.ಎನ್.ಆರ್ ವಕೀಲರಿಂದಃ-**

1 ನೇ ಪ್ರತಿವಾದಿ ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿರವರ ಮಗಳು. ನಿಂಗಶೆಟ್ಟಿರವರ ಹೆಂಡತಿಯ ಹೆಸರು ಪಾರ್ವತಮ್ಮ. ಮುಂದುವರಿದು ಪಾರ್ವತಮ್ಮರವರನ್ನು ದೊಡ್ಡತಾಯಮ್ಮ ಎಂತಲೂ ಕರೆಯುತ್ತಿದ್ದರು. ನಿಂಗಶೆಟ್ಟಿರವರ ಒಬ್ಬಳೇ ಮಗಳು 1 ನೇ ಪ್ರತಿವಾದಿ. ಸ.ನಂ.58 ನಿಂಗಶೆಟ್ಟಿರವರಿಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನು ಎಂದರೆ ಸರಿ . ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ , ದೊಡ್ಡತಾಯಮ್ಮ ಮತ್ತು 1 ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿ . ಸಾಕ್ಷಿಯು ಮುಂದುವರಿದು ನಮ್ಮ ಮನೆಯಲ್ಲಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆಯ ಹೆಸರು ಶಂಭುಶೆಟ್ಟಿ, ನನ್ನ ತಂದೆಗೆ ಯಾವುದೇ ಆಸ್ತಿ ಇರಲಿಲ್ಲ. ಮುಂದುವರಿದು ಸ.ನಂ.117 ರಲ್ಲಿ 2 ಎಕರೆ 5 ಗುಂಟೆ ಇದ್ದು, ನನ್ನ ತಂದೆಯ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರುಪಡಿಸಿರುವುದಿಲ್ಲ. ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿರವರೇ ದಾವಾ ಆಸ್ತಿಗೆ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ. ನಾನು ಕಂದಾಯ ಕಟ್ಟಿರುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ 1984 ನೇ ಇಸವಿವರೆಗೂ ಬದುಕಿದ್ದರು.

ದಾವಾ ಆಸ್ತಿಯನ್ನು ಪ್ರತಿವಾದಿಯು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ ರವರಿಗೆ ವ್ಯವಸಾಯ ಬಿಟ್ಟು ಬೇರೆ ವೃತ್ತಿ ಮಾಡುತ್ತಿರಲಿಲ್ಲ ಎಂದರೆ ಸರಿ . 1 ನೇ ಪ್ರತಿವಾದಿ ಯಾವಾಗ ಮದುವೆಯಾಗಿರುತ್ತಾರೆ ಎಂದು ದಿನಾಂಕ ಗೊತ್ತಿಲ್ಲ. ಮುಂದುವರಿದು ನಾನೇ ಮದುವೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೂ ಮತ್ತು 1 ನೇ ಪ್ರತಿವಾದಿಗೂ ಸುಮಾರು ಹತ್ತು ವರ್ಷಗಳ ವಯಸ್ಸಿನ ಅಂತರವಿರುತ್ತದೆ. 1 ನೇ ಪ್ರತಿವಾದಿಯ ಮದುವೆ

ನಮ್ಮ ಊರಿನಲ್ಲೇ ನಮ್ಮ ಮನೆಯಲ್ಲೇ ನಡೆದಿರುತ್ತದೆ. 1 ನೇ ಪ್ರತಿವಾದಿಯ ವಿವಾಹದ ಪತ್ರಿಕೆಯನ್ನು ಹಾಜರುಪಡಿಸುತ್ತೀರಾ ಎಂದರೆ ವಿವಾಹ ಪತ್ರಿಕೆ ಮಾಡಿಸಿರಲಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯಾಗಲಿ ಅಥವಾ ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ ನಮ್ಮ ಮನೆಯಲ್ಲಿ ಇದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ ಮೃತಪಟ್ಟ ನಂತರ ನಿಪಿ-1 ಸಿಕ್ಕಿರುತ್ತದೆ. ಸದರಿಯವರು ನಮ್ಮ ಊರಿನಲ್ಲೇ ನಮ್ಮ ಮನೆಯಲ್ಲಿ ಮೃತಪಟ್ಟಿರುತ್ತಾರೆ. ಸದರಿಯವರು ಏನು ವ್ಯವಹಾರ ಮಾಡುತ್ತಿದ್ದರೆ ಎಂದರೆ ಏನು ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಅವರ ಜೀವನೋಪಾಯವನ್ನು ಅವರೇ ನೋಡಿಕೊಳ್ಳುತ್ತಿದ್ದರು. ಸಾಯುವವರಗೂ ಊರಿನಲ್ಲಿ ಓಡಾಡಿಕೊಂಡು ಆರೋಗ್ಯವಾಗಿ ಚೆನ್ನಾಗಿದ್ದರು ಎಂದರೆ ಸರಿ . ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ ಮನೆಯಲ್ಲಿ ಯಾರು ಇದ್ದರು ಎಂದರೆ ಅವರ ಮನೆಯಲ್ಲಿ ನಾವು ಇದ್ದೆವು ಎಂದು ನುಡಿಯುತ್ತಾರೆ.

ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ ರವರು ನಮ್ಮ ಜೊತೆಯಲ್ಲಿ ವಾಸ ಇದ್ದರು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನಿಪಿ-1 ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ನಿಪಿ-1 ನ್ನು ಬರೆಯುವಾಗ ಯಾರೆಲ್ಲ ಹಾಜರಿದ್ದರು ಎಂದು ಗೊತ್ತಿಲ್ಲ. ಸದರಿ ನಿಪಿ-1 ವಿಲ್ ನಮ್ಮ ಮನೆಯಲ್ಲಿ ಸಿಕ್ಕಿರುತ್ತದೆ. ಯಾವ ದಿನಾಂಕ ಮತ್ತು ಯಾವ ಸ್ಥಳದಲ್ಲಿ ಸಿಕ್ಕಿರುತ್ತದೆ ಎಂದು ನನ್ನ ದಾವಾ ಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ ರವರು ಬೇರೆ ಊರಿಗೆ ಹೋಗುವಾಗ ಬೇರೆಯವರ ಸಹಾಯ ಬೇಕಾಗಿತ್ತು ಎಂದರೆ ಸರಿಯಲ್ಲ. ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿ ರವರು ಆರೋಗ್ಯವಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರ ತಾಯಿಯ ಹೆಸರು ಪಾರ್ವತಮ್ಮ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿಯನ್ನು ಕಿತ್ತೂರಿನ ವೆಂಕಟರಮಣಶೆಟ್ಟಿರವರಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಅವರಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು, ಅವರೆಂದರೆ ಶ್ರೀನಿವಾಸ , ಸುಧಾ , ರವಿ ಮತ್ತು ಇನ್ನೊಬ್ಬ ಮಗಳು ಹೆಸರು ಗೊತ್ತಿಲ್ಲ.

1984 ರಿಂದ ಖಾತೆ ಮಾಡಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ 1984 ರಲ್ಲಿ ಅರ್ಜಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ಹಾಜರುಪಡಿಸಿಲ್ಲ. ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುವುದರಿಂದ ಖಾತೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಂಗಶೆಟ್ಟಿ ಅಲಿಯಾಸ್ ಮುದ್ದಶೆಟ್ಟಿರವರು ಸಾಯುವ ಐದು ವರ್ಷಗಳಿಂದ ಅನಾರೋಗ್ಯಪೀಡಿತರಾಗಿದ್ದರು ಎಂದರೆ ಸರಿಯಲ್ಲ. ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಯುವ ಸಮಯದಲ್ಲಿ ಮಾತು ಸಹ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ಅವರ ತಂದೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಿಂಗಶೆಟ್ಟಿರವರು ಅನಾರೋಗ್ಯವಾಗಿದ್ದರು ಅವರಿಗೆ ಚಿಕಿತ್ಸೆ ನೀಡಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಿಂಗಶೆಟ್ಟಿರವರ ಉತ್ತರ ಕ್ರಿಯಾದಿ ಪತ್ರಿಕೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಮಾಡಿಸಿರಲಲ್ಲ ಎಂದು ನುಡಿಯುತ್ತಾರೆ.

ನಿಂಗಶೆಟ್ಟಿರವರು ನಮ್ಮ ಮನೆಯಲ್ಲಿ ಇಲ್ಲದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಮತ್ತು ಅವರು ಯಾವುದೇ ವಿಲ್ ನ್ನು ಬರೆದುಕೊಟ್ಟಿರುವುದಿಲ್ಲ ಮತ್ತು ಬರೆದುಕೊಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಮುದ್ದಶೆಟ್ಟಿರವರ ತಂದೆಯ ಹೆಸರು ಗೋಪಾಲಶೆಟ್ಟಿ ಮುದ್ದಶೆಟ್ಟಿರವರಿಗೆ ಐದು ಜನ ಅಣ್ಣ ತಮ್ಮಂದಿರು. ಅವರೆಂದರೆ ಗೋಪಾಲಶೆಟ್ಟಿ ,ದಾಸಶೆಟ್ಟಿ , ತಿಮ್ಮಶೆಟ್ಟಿ ಮತ್ತು ಶಂಭುಶೆಟ್ಟಿ. ರಂಗಮ್ಮ , ಕೆಂಪಮ್ಮ, ಪುಟ್ಟಮಣಮ್ಮ ಮೂರು ಜನ ಸಹೋದರಿಯರು ಇರುತ್ತಾರೆ. ಯಾಲಕ್ಕಮ್ಮ ನನ್ನ ತಂದೆಯ ತಂಗಿ.

ತಿಮ್ಮಶೆಟ್ಟಿರವರಿಗೆ ನಾಲ್ಕು ಜನ ಮಕ್ಕಳು. ಅವರೆಂದರೆ ಗೋಪಾಲಕೃಷ್ಣ , ರಾಜಶೆಟ್ಟಿ ಕೂಸಮ್ಮ ಮತ್ತು ಗೌರಮ್ಮ . ಯಾಲಕ್ಕಮ್ಮನಿಗೆ ಐದು ಜನ ಮಕ್ಕಳು ಎಂದರೆ ಸರಿ . ದಾವಾ ಸ್ವತ್ತು ಮುದ್ದುಶೆಟ್ಟಿ ಅಲಿಯಾಸ್ ನಿಂಗಶೆಟ್ಟಿರವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಿಂಗಶೆಟ್ಟಿರವರು ಅರ್ಜಿ ಕೊಡುವ ಸಮಯದಲ್ಲಿ ನೀವು ಇದ್ದಿರಾ ಎಂದರೆ ಗೊತ್ತಿಲ್ಲ.

1 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಏನು ಬೆಳೆ ಬೆಳೆದಿದ್ದಾರೆ ಎಂದರೆ ನಾಲ್ಕು ಜನ ಭಾಗ ಮಾಡಿಕೊಂಡಿದ್ದು,1 ನೇ ಪ್ರತಿವಾದಿಯವರು 1 ನೇ ಎಕರೆ ಜಮೀನಿನಲ್ಲಿಪಿ ಜೋಳ ,ಎಳ್ಳು ಬೆಳೆದಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ 4 ಎಕರೆ ಜಮೀನಿನಲ್ಲಿ ಸ್ವಾಧೀನ ಇದ್ದರೂ ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿ ಅವಿದ್ಯಾವಂತರು ಎಂದರೆ ಸರಿ . ಅವರಿಗೆ ಅವರ ತಂದೆಯನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದರೆ ಸರಿ . ದಾವಾ ಆಸ್ತಿ ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ್ದರೂ ನಮ್ಮದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಂಗಶೆಟ್ಟರವರು ತೀರಿಕೊಂಡ ನಂತರ 1 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡು ಸ್ವಾಧೀನ ಇರುತ್ತಾರೆ ಎಂದರೆ ಖಾತೆ ಮಾತ್ರ ಮಾಡಿಸಿಕೊಂಡಿರುತ್ತಾರೆ, ನಾವೆಲ್ಲಾ ಸ್ವಾಧೀನ ಇರುತ್ತೇವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಖಾತೆಯನ್ನು 2011 ರಲ್ಲಿ ಎ.ಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾಧೀನ ಇಲ್ಲದಿದ್ದರೂ ನಿಪಿ-1 ರ ಮೇಲೆ 1 ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15.07.2013 ರಂದು ಪ್ರತಿವಾದಿಗಳು ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಿದ್ದು, ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರುಪಡಿಸಿಲ್ಲ. ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿ ಮಾಡಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**